ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/04/ಇಸಿಎಸ್ (1)/2025

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:10.07.2025

## ಜ್ಞಾಪನ

ವಿಷಯ: ಜುಲೈ 2025 ರ Makeup SEE ಪರೀಕ್ಷೆಯ ಪ್ರಶ್ನೆ ಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದಂತೆ ಎಟಿಎಸ್ ಶೀಟ್ ಗಳನ್ನು ಮುದ್ರಿಸಿ / ಮುದ್ರಿತ **ಎಟಿಎಸ್ ಶೀಟ್** ಗಳನ್ನು ಪರಿಶೀಲಿಸುವುದು ಮತ್ತು **telegram group**ನ **VC** ಗೆ ಥಿಯರಿ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರುಗಳು ಹಾಜರಾಗುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:10.07.2025
2. ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಟಿಪಿಇ 2013 ದಿನಾಂಕ:17.04.2015

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರ ಸುತ್ತೋಲೆಯನ್ವಯ ಜುಲೈ 2025 ರ Makeup SEE ಪರೀಕ್ಷೆ ಗಳಿಗಾಗಿ ಮುಖ್ಯ ವೀಕ್ಷಕರನ್ನು ನೇಮಿಸಿ, ಪರೀಕ್ಷಾ ದಿನದಂದು ಪ್ರಶ್ನೆ ಪತ್ರಿಕೆ ಮುದ್ರಣ ಕುರಿತು ಸೂಚನೆಗಳನ್ನು ನೀಡಿ, ಮುಖ್ಯವೀಕ್ಷಕರು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ಮತ್ತು ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳ ಸಮನ್ವತೆಯೊಂದಿಗೆ ಆಯಾ ದಿನಕ್ಕೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಾತ್ರ Online ಪ್ರಶ್ನೆ ಪತ್ರಿಕೆಗಳನ್ನು, ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಮುದ್ರಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿತ್ತು.

**ಪ್ರತಿ ಪರೀಕ್ಷಾ ದಿನದ ಹಿಂದಿನ ದಿನವೇ ATS Sheet ಗಳನ್ನು ಮುದ್ರಿಸಿಟ್ಟುಕೊಂಡು, ಪರೀಕ್ಷಾ ದಿನದಂದು ಬಿಟಿಇ ಲಿಂಕ್ಸ್ ಪೋರ್ಟಲ್ ನಲ್ಲಿ ನಿಗದಿತ ಸಮಯದಲ್ಲಿ ಸುಸೂತ್ರವಾಗಿ ಪ್ರಶ್ನೆ ಪತ್ರಿಕೆಯನ್ನು ಮುದ್ರಿಸಲು** ಸಂಬಂಧಪಟ್ಟ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರುಗಳು ಮಾತ್ರ ಕಡ್ಡಾಯವಾಗಿ ಪ್ರತಿದಿನ ಪರೀಕ್ಷೆ ಪ್ರಾರಂಭವಾಗುವ ಪ್ರತಿ ಸೆಷನ್ ಗಳ 01 ಗಂಟೆ ಮುಂಚಿತವಾಗಿ **"BTELinx User Forum" telegram group** ನಲ್ಲಿ **VC** ಗೆ ಸೇರ್ಪಡೆಗೊಂಡು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಅನುಸರಿಸಿ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಲು ಕ್ರಮಕೈಗೊಳ್ಳುವಂತೆ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಹಾಗೂ ಮುಖ್ಯ ವೀಕ್ಷಕರುಗಳು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ಮುಂದುವರೆದು, ಆಯಾ ಪರೀಕ್ಷಾ ಕೇಂದ್ರಗಳಿಗೆ ಜೋಡಣೆಗೊಂಡ ಸಂಬಂಧಿಸಿದ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರು / ಜವಾಬ್ದಾರಿಯುತ ಸಿಬ್ಬಂದಿಯವರು ಪರೀಕ್ಷಾ ಕೇಂದ್ರದಲ್ಲಿ ಹಾಜರಿದ್ದು ಪ್ರಶ್ನೆ ಪತ್ರಿಕೆ ಕೋಡ್ ವಾರು (QP Codewise) ಮುದ್ರಿತ ATS Sheet ಗಳನ್ನು ಪರಿಶೀಲಿಸಿ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳ ವಿವರಗಳು ಅದರಲ್ಲಿ ಸೇರ್ಪಡೆಗೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದು.

ಪ್ರಶ್ನೆಪತ್ರಿಕೆಗಳನ್ನು Online ಮುದ್ರಿಸಿದ ಬಗ್ಗೆ QP Code, Total Quantity Printed (Count), Room wise Distributed Count, Balance Count ಈ ಎಲ್ಲಾ ಮಾಹಿತಿಗಳನ್ನು QP Register (ವಹಿ)ಯಲ್ಲಿ ನಿರ್ವಹಿಸಿ (Format-13) ಬಾಹ್ಯ ಪರಿವೀಕ್ಷಕರು, ಪ್ರಶ್ನೆಪತ್ರಿಕೆ ಭದ್ರತಾ ಅಧಿಕಾರಿ ಮತ್ತು ಪ್ರಾಂಶುಪಾಲರು ಒಟ್ಟಾಗಿ ಪ್ರಶ್ನೆಪತ್ರಿಕೆ ಲೆಕ್ಕ ಇಡುವಂತೆ ತಿಳಿಸಲಾಗಿದೆ. ಈ ವಿಷಯದಲ್ಲಿ ಯಾವುದೇ ಗೊಂದಲ / ಲೋಪದೋಷಗಳು ಉಂಟಾಗದಂತೆ ಕ್ರಮವಹಿಸಲು ಹಾಗೂ ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರ್ಯತೆ ಕಾಪಾಡಿಕೊಂಡು ಪರೀಕ್ಷೆಗಳನ್ನು ನಡೆಸಲು ಸೂಚಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಪಾಲಿಸದೆ, ಪರೀಕ್ಷೆಗೆ ನೋಂದಾಯಿಸಿರುವ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಮುನ್ನ ಮುದ್ರಿಸಲು ವಿಫಲರಾದಲ್ಲಿ ಮುಂದಿನ ಆಗುಹೋಗುಗಳಿಗೆ ಮೇಲ್ಕಂಡ ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಉಲ್ಲೇಖ(2) ರ ಸರ್ಕಾರದ ಆದೇಶ/ ಅನ್ವಯವಾಗುವ ನಿಯಮಗಳಂತೆ ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ ,
ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ,ಪ್ರಶ್ನೆ ಪತ್ರಿಕೆ ಭದ್ರತಾ ಅಧಿಕಾರಿಗಳು ಹಾಗೂ ಮುಖ್ಯ ವೀಕ್ಷಕರುಗಳು – ಅಗತ್ಯ ಕ್ರಮಕ್ಕಾಗಿ

ಪ್ರತಿ: 1.ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್ – ಮಾಹಿತಿಗಾಗಿ
2.ಇ-ಗವರ್ನೆನ್ಸ್ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
3.ಗಣಕ ಕೇಂದ್ರ- ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
4.ನಿರ್ದೇಶಕರ ಆಪ್ತಶಾಖೆ.